38 ಶ್ರೀ ಬಸವರಾಜನ್.ಎಸ್.ಕೆ (ಚಿತ್ರದುರ್ಗ)
ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು)

1) ರಾಜ್ಯದ ರೈತರು ಬೆಳೆದ ಹುಲ್ಲಿನ ಬಣವೆಗಳಿಗೆ ಆಕಸ್ಮಿಕ ಬೆಂಕಿ ತಗುಲಿ ನಷ್ಟ ಅನುಭವಿಸುವ ರೈತರಿಗೆ ಪರಿಹಾರ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

2) ಹಾಗಿದ್ದಲ್ಲಿ, ರೈತರಿಗೆ ಪರಿಹಾರ ನೀಡದೇ ಇರಲು ಕಾರಣಗಳೇನು;

ಕೇಂದ್ರ ಸರ್ಕಾರ ಹೊರಡಿಸಿರುವ ಪ್ರಕೃತಿ ವಿಕೋಪ ಮಾರ್ಗಸೂಚಿಗಳಲ್ಲಿ ಅವಕಾಶವಿಲ್ಲ.

3) ರಾಜ್ಯದ ಬಡಜನರ ಮನೆಗಳು ಆಕಸ್ಮಿಕ ಬೆಂಕಿಗೆ ಆಹುತಿಯಾದಾಗ ಮನೆಗಳಿಗೆ ನೀಡುತ್ತಿರುವ ಪರಿಹಾರದ ಮೊತ್ತವೆಷ್ಟು;

ಹಾನಿಯಾದ ಮನೆಗಳಿಗೆ ಕೇಂದ್ರ ಸರ್ಕಾರ ನಿಗಧಿಪಡಿಸಿದ ಮಾರ್ಗಸೂಚಿ ಪ್ರಕಾರ, ಕೆಳಕಂಡಂತೆ ಪರಿಹಾರ ನೀಡಲಾಗುತ್ತಿದೆ.

1) ಪಕ್ಕಾ ಮನೆಗೆ ಪೂರ್ತಿ ನಾಶವಾಗಿದ್ದಕ್ಕೆ ರೂ.25000–00
2) ಕಚ್ಚಾ ಮನೆಗೆ ಪೂರ್ತಿ ನಾಶವಾಗಿದ್ದಕ್ಕೆ ರೂ.10000–00
3) ತೀವ್ರವಾಗಿ ಹಾಳಾಗಿರುವ ಪಕ್ಕಾ ಮನೆಗೆ ರೂ.5000–00
4) ತೀವ್ರವಾಗಿ ಹಾಳಾಗಿರುವ ಕಚ್ಚಾ ಮನೆಗೆ ರೂ.2500–00
5) ಭಾಗಶಃ ಹಾನಿಯಾಗಿರುವ ಪಕ್ಕಾ ಮತ್ತು ಕಚ್ಚಾ ಮನೆಗೆ (ಗುಡಿಸಲು ಹೊರತು ಪಡಿಸಿ) ರೂ. 1500–00
6) ಗುಡಿಸಲು ನಾಶವಾದರೆ ರೂ.2000–00

4) ಸದರಿ ಪರಿಹಾರದ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇಲ್ಲ.

5) ಹಾಗಿದ್ದಲ್ಲಿ, ಎಂದಿನಿಂದ ಪರಿಹಾರದ ಮೊತ್ತವನ್ನು ಹೆಚ್ಚಿಸಲಾಗುವುದು; ಶೇಕಡವಾರು ಎಷ್ಟು ಮೊತ್ತ ಹೆಚ್ಚಿಸಲಾಗುವುದು;

ಉದ್ಭವಿಸುವುದಿಲ್ಲ

6) ಹಾಗಿದ್ದಲ್ಲಿ, ಯಾವಾಗಿನಿಂದ ಪರಿಹಾರದ ಮೊತ್ತವನ್ನು ನೀಡಲಾಗುವುದು;

ಉದ್ಭವಿಸುವುದಿಲ್ಲ

159 ಡಾ: ಬಗಲಿ ಸಾರ್ವಭೌಮ ಸಕಗೌಡ (ಇಂಡಿ)
ಪಿ.ಎಂ.ನರೇಂದ್ರಸ್ವಾಮಿ(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಇಂಡಿ ಮತ ಕ್ಷೇತ್ರದಲ್ಲಿ ಸಿ.ಡಿ.ಪಿ.ಓ ಕಾನೂನು ಬಾಹಿರವಾಗಿ ಅಂಗನವಾಡಿ ಮೇಲ್ವಿಚಾರಕರ ವರ್ಗಾವಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಶಿಶು ಅಭಿವೃದ್ಧಿಯೋಜನಾಧಿಕಾರಿಗಳು ಮೇಲ್ವಿಚಾರಕಿಯರ ವಲಯ ಬದಲಾವಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕೆಲವು ಮೇಲ್ವಿಚಾರಕಿಯರು 5-6 ವರ್ಷಗಳಿಂದ ಒಂದೇ ವಲಯಗಳಿಂದ ಕಾರ್ಯ ನಿರ್ವಹಿಸುತ್ತಿದ್ದುದರಿಂದ ಹಾಗೂ ಅವರ ಮೇಲೆ ದೂರುಗಳು ಬಂದಿದ್ದರಿಂದ ಅವರ ವಲಯಗಳನ್ನು ಬದಲಾಯಿಸಿದ್ದು, ಬಿಜಾಪುರ ಜಿಲ್ಲಾ ಸಹಾಯಕ ನಿರ್ದೇಶಕರ ದಿ:28-02-2009 ರ ಸೂಚನೆಯಂತೆ ಆದೇಶವನ್ನು ರದ್ದು ಪಡಿಸಲಾಗಿದೆ.

ಆ) ಬಂದಿದ್ದಲ್ಲಿ, ಈ ಮಕ್ಕಳಿಗೆ ಮತ್ತು ತಾಯಂದಿರಿಗೆ ಆಹಾರ ಸಮರ್ಪಕವಾಗಿ ವಿತರಣೆಯಾಗುತ್ತಿಲ್ಲದಿರುವುದು ಮತ್ತು ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ನೀಡಲಿಕ್ಕೆ ಹಣ ಕೇಳುತ್ತಿರುವುದು ನಿಜವೇ;

ಇಲ್ಲ.

ಇ) ಅದನ್ನು ಸರಿಪಡಿಸಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಳ್ಳುತ್ತಿದೆ;

ದಿ:3-11-2007 ರ ಆದೇಶ ಸಂ.ಮಮಇ 235 ಐಸಿಡಿ 2007ರಲ್ಲಿ ಗ್ರಾಮೀಣ ಹಾಗೂ ನಗರದ ಪ್ರದೇಶದ ಅಂಗನವಾಡಿಗಳ ಉತ್ತಮ ಕಾರ್ಯ ನಿರ್ವಹಣೆಗಾಗಿ ಬಾಲವಿಕಾಸ ಸಮಿತಿಯನ್ನು ರಚಿಸಿದ್ದು, ಅಂಗನವಾಡಿಗಳಿಗೆ ಆಹಾರ ಸರಬರಾಜು ಆಗುವ ವೇಳೆಯಲ್ಲಿ ಸಮಿತಿಯ ಇಬ್ಬರು ಸದಸ್ಯರು ಹಾಜರಿದ್ದು, ಗುಣಮಟ್ಟ ಸರಿಯಾಗಿ ಇರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕೆಂದು ಮಾರ್ಗಸೂಚಿಯನ್ನು ನೀಡಲಾಗಿದೆ. ಆಹಾರ ಸಮರ್ಪಕವಾಗಿ ವಿತರಣೆಯಾಗುತ್ತಿಲ್ಲದಿರುವ ಹಾಗೂ ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ನೀಡಲು ಹಣ ಕೇಳುತ್ತಿರುವ ಪ್ರಕರಣಗಳ ಬಗ್ಗೆ ಯಾವುದೇ ದೂರು ಬಂದಿಲ್ಲ. ಈ ಬಗ್ಗೆ ಯಾವುದೇ ದೂರು ಬಂದಲ್ಲಿ ಅಧಿಕಾರಿಗಳ ಮಟ್ಟದಲ್ಲಿ ತಕ್ಷಣವೇ ತನಿಖೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಈ) ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕೂಡಲೇ ಕ್ರಮ ಕೈಗೊಳ್ಳಲಾಗುವುದೆ?

ಪ್ರಧಾನ ಕಚೇರಿಯಿಂದ ನೋಡಲ್ ಅಧಿಕಾರಿಗಳು ರಾಜ್ಯ ಮಟ್ಟದಲ್ಲಿ ಸ್ವೀಕರಿಸಿದ ದೂರುಗಳನ್ನು ಪರಿಶೀಲಿಸಿ ವರದಿ ನೀಡುತ್ತಾರೆ. ನಂತರ ಯಾರಾದರೂ ಸಿಬ್ಬಂದಿಗಳು ತಪ್ಪಿತಸ್ಥರೆಂದು ಕಂಡು ಬಂದಲ್ಲಿ ಅಂತಹ ಸಿಬ್ಬಂದಿಯ ಮೇಲೆ ಇಲಾಖೆಯಿಂದ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

160 ಡಾ: ಬಗಲಿ ಸರ್ವಭೌಮ ಸಶಗೌಡ (ಇಂಡಿ)
ಶಿವರಾಜ್ ಎಸ್. ತಂಗಡಗಿ(ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು)

ಅ) 2006-07ರಲ್ಲಿ ಇಂಡಿ ಮತಕ್ಷೇತ್ರದ ರೈತರಿಗೆ ಕಬ್ಬಿನ ಪರಿಹಾರ ನೀಡಲು ಸರ್ಕಾರಿ ಆದೇಶವಿದ್ದರೂ ನೀಡದಿರಲು ಕಾರಣವೇನು?